## ಪ್ರಜ್ಞೆ ಬಗೆಗಿನ ಜಿಜ್ಞಾಸೆ ಅದ್ಭುತ!

‘ಜೀವಜಗತ್ತಿನ 3 ಅದ್ಭುತಗಳು’ (ಜೂ.01, ಕೆ.ಎನ್.ಗಣೇಶಯ್ಯ) ಮುಖಪುಟ ಲೇಖನ ಅದ್ಭುತವಾಗಿದೆ. ಪ್ರಜ್ಞೆಯ ಬಗೆಗಿನ ಜಿಜ್ಞಾಸೆ ನಮ್ಮನ್ನು ಮತ್ತಷ್ಟು ಪ್ರಜ್ಞಾವಂತರನ್ನಾಗಿಸಿತು. ವಿಕಾಸಕ್ರಿಯೆಯ ಬೇರೆ ಬೇರೆ ಆಯಾಮಗಳ ಪ್ರಸ್ತುತಿ ನಮ್ಮನ್ನು ನಾವೇ ಅರಿಯುವಂತೆ ಮಾಡಿತು. ‘ಅಸಗತ’ ಎಂಬ ನಾಲ್ಕು ರಾಸಾಯನಿಕಗಳು ಭೂಮಿ ಮೇಲೆ ಜೀವೋದ್ಭವಕ್ಕೆ ಕಾರಣವಾದುದನ್ನು ದ.ರಾ. ಬೇಂದ್ರೆಯವರ ‘ನಾಕುತಂತಿ’ಯೊಂದಿಗೆ ಸಮನ್ವಯಗೊಳಿಸಿದ್ದು ಡಿವಿಜಿಯವರ ಋಷಿವಾಕ್ಯ ವಿಜ್ಞಾನ ಕಲೆ ಮೇಳವಿಸಿದ್ದಕ್ಕೆ ಹೋಲಿಸಬಹುದು. ಒಟ್ಟಿನಲ್ಲಿ ಇದೊಂದು ವಿಶಿಷ್ಟ ಬರಹವೇ ಸರಿ.

—ಹಿ.ಶಾ. ಸುಬ್ರಹ್ಮಣ್ಯ, ಬೆಂಗಳೂರು

## ವಿಜ್ಞಾನದ ಸರಳೀಕರಣ

ಮಾಹಿತಿ ಕಣಜದಂತಿದೆ ಜೀವಜಗತ್ತಿನ ಕುರಿತ ಲೇಖನ. ವಿಜ್ಞಾನವನ್ನು ಸರಳೀಕರಿಸಿ ಹೇಳುವ ರೀತಿ ಲೇಖಕರಿಗೆ ಚೆನ್ನಾಗಿ ಕರಗತವಾಗಿದೆ.

—ಎಲೆ ರುದ್ರಸ್ವಾಮಿ

## ಓದುಗರಿಗೆ ಚಿಂತನ-ಮಂಥನ

ಜೀವ, ಪ್ರಜ್ಞೆ, ವಿಕಸನ ಈ ಪದಗಳ ಅರ್ಥವನ್ನು ಅದೆಷ್ಟು ಚೆನ್ನಾಗಿ ವಿವರಿಸಿದ್ದಾರೆ ಲೇಖನದಲ್ಲಿ!




ನಾಲ್ಕು ಸ್ವರಗಳು ‘ಅಸಗತ’ ಡಿಎನ್‌ಎಯ ಮೂಲ ಎಂಬ ವಿಷಯ ವಿಸ್ಮಯವೆನಿಸಿತು. ಲೇಖನದಲ್ಲಿನ ಪದ್ಯವಂತೂ ಅತ್ಯುತ್ತಮ. ಇದನ್ನು ಎರಡು ಮೂರು ಬಾರಿ ಓದಿ ಆನಂದಿಸಿದೆ. ಓದುಗರಿಗೆ ಚಿಂತನ ಮಂಥನ ಮಾಡಲು ಅವಕಾಶ ಕಲ್ಪಿಸಿದೆ.

—ಬಿ. ಶೋಭಾ ಅರಸ, ತೆಕ್ಕಟ್ಟೆ

## ಜೀವವಿಕಸನದ ಅರಿವು ಮೂಡಿಸಿತು

ಅಭೂತಪೂರ್ವವಾದ ಈ ಲೇಖನದಲ್ಲಿ ‘ನ್ಯೂಕ್ಲಿಯೋಟೈಡ್’ಗಳ ವಿವರಣೆ ಮತ್ತು ‘ನಾಕುಸ್ವರ’ಗಳ ಸಂಯೋಜನೆ ಲೇಖಕರ ಸೃಜನಶೀಲತೆಗೊಂದು ಉದಾಹರಣೆ. ‘ಜೀವ’ದ ಅತ್ಯಂತ ಸೂಕ್ಷ್ಮವಾದ ‘ವೈರಾಣು’ಗಳು ‘ಆರ್.ಎನ್.ಎ’ ಮತ್ತು ‘ಡಿ.ಎನ್.ಎ’ ವೈರಾಣುಗಳಾಗಿದ್ದು, ಪರೋಪಜೀವಿಗಳೇ ಆಗಿರುತ್ತವೆ. ‘ಜೀವ ಉಗಮ’ದಲ್ಲಿ (origin of life) ಆಗಿರಬಹುದಾದ ಸಂಕೀರ್ಣ ಕ್ರಿಯೆಗಳು (ದ್ವಿಗುಣಗೊಳ್ಳಲು) ಇನ್ನೂ ನಿಗೂಢವಾಗಿಯೇ ಉಳಿದಿದೆಯಲ್ಲವೇ?

—ಶಶಿಧರ, ಬೆಂಗಳೂರು

## ‘ನಾಕುತಂತಿ’ಯ ಸುಂದರ ಸಮನ್ವಯ

ಪ್ರಜ್ಞಾವಂತರೆಲ್ಲರೂ ತಲೆಗೆಡಿಸಿಕೊಳ್ಳುವ ಜೀವಜಗತ್ತಿನ ಪ್ರಜ್ಞೆಯ ಮೂಲಗಳನ್ನು ಸರಳ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಜೀವಜಗತ್ತು ಭೂಮಿಯಲ್ಲಿ ವಿಕಾಸವಾಗಿ ಪ್ರಜ್ಞಾವಂತ ನಾಗರಿಕ ಮಾನವನಾದ ಕೌತುಕದ ಬಗೆಗಿನ ಪ್ರಶ್ನೆಗಳಿಗೆ ಸರಳ ಉತ್ತರ ನೀಡುವ ಪ್ರಯತ್ನ ಶ್ಲಾಘನೀಯ. ‘ಅಸಗತ’ಗಳ ಚಮತ್ಕಾರವನ್ನು ಚಿತ್ರಗಳೊಡನೆ ವಿವರಿಸಿರುವ ಪರಿ ಮನಸೆಳೆಯುತ್ತದೆ. ‘ನಾಕುತಂತಿ’ಯ ಸುಂದರ ಸಮನ್ವಯ ಲೇಖನಕ್ಕೆ ಗರಿ ಮೂಡಿಸಿದೆ.

—ಗೀತಾ ನಲ್ಲೀಕಾಯಿ

## ಸಾಮಾನ್ಯರಿಗೂ ತಿಳುವಳಿಕೆ...

ಸರಳತೆ, ವಿಸ್ತೃತ ವಿವರ ವಿಶ್ಲೇಷಣೆಗಳಿಂದ ಜೀವಜಗತ್ತಿನ ವಿಕಸನದ ಈ ಲೇಖನ ಅದ್ಭುತವಾಗಿದೆ. ಸಾಮಾನ್ಯರಲ್ಲೂ ತಿಳುವಳಿಕೆ ಮೂಡಿಸಿದೆ.

—ರೇವತಿ ಟಿ.



## ಬಲು ಸುಂದರ ಪ್ರವಾಸ ಕಥನ

‘ಪುಟ್ಟ ದೇಶ ಬಲ್ಗೇರಿಯಾದ ದೊಡ್ಡ ಇತಿಹಾಸದ ಕಥನ’ (ಜೂ.01, ಡಾ. ಪ್ರೇಮಲತ ಬಿ.) ಪ್ರವಾಸ ಕಥನ ಬಹಳ ಚೆನ್ನಾಗಿದೆ. ಬಲ್ಗೇರಿಯಾ ಎಂಬ ಪುಟ್ಟ ದೇಶದಲ್ಲಿ ಅದೆಷ್ಟೊಂದು ಇತಿಹಾಸದ ಕಥೆಗಳು ಉಳಿದುಕೊಂಡಿವೆ ಎಂಬುದನ್ನು ತಿಳಿದು ಆಶ್ಚರ್ಯವಾಯಿತು. ಚರಿತ್ರೆಯ ಕುರುಹುಗಳನ್ನು ಅಲ್ಲಿನವರು ಇಂದಿಗೂ ಕಾಪಾಡಿಕೊಂಡು ಬಂದಿರುವ ರೀತಿಯೂ ಅದ್ಭುತವೆನಿಸಿತು.

— ಲತಾ ಚೇತನ್, ಹುಬ್ಬಳ್ಳಿ

## ಮನದ ಬಿಂಬ

‘ಬಿಂಬಗಳ ಲೋಕ’ (ಜೂ.01, ಚಂಪಕಮಾಲಾ) ವಿಚಾರ ಲಹರಿ ಆಪ್ತವೆನಿಸಿತು. ಬದುಕಿನ ಹಲವು ಘಟ್ಟಗಳಿಗೆ ಸಾಕ್ಷಿಯಾಗುವ ಫೋಟೊ ಎನ್ನುವುದು ಆಗ ಪಟ್ಟ ಖುಷಿಯನ್ನೂ ಮತ್ತು ಇನ್ನೆಂದೂ ಸಿಗಲಾರದ ಕ್ಷಣಗಳನ್ನು ಕಳೆದುಕೊಂಡ ವಿಷಾದವನ್ನೂ ನೆನಪಿಸಿ ಮನಸನ್ನು ಆರ್ದ್ರಗೊಳಿಸುವುದಂತೂ ನಿಜ. ಫೋಟೊಗಳು ಎಂದಿಗೂ ಭೂತಕಾಲವನ್ನು ವರ್ತಮಾನ ಕಾಲಕ್ಕೆ ಜೋಡಿಸುವ ಸರಪಣಿ.

—ಶಾಂತಲಾ ರಾಜಗೋಪಾಲ್, ಬೆಂಗಳೂರು

## ಎಚ್ಚರಿಗೆ ಅಗತ್ಯ

‘ವಯಸ್ಸು 12; ದೇಹ 6 ಪ್ಯಾಕ್ಸ್’ (ಜೂ.01, ಪೃಥ್ವಿರಾಜ್) ಲೇಖನ ಉತ್ತಮ ದೇಹದಾರ್ಢ್ಯ ಹೊಂದಲು ಕಿರಿ ವಯಸ್ಸಿನ ಹುಡುಗರಿಗೆ/ಯುವಕರಿಗೆ ಸ್ಫೂರ್ತಿಯಾದರೂ, ಸರಿಯಾದ ಮಾರ್ಗದರ್ಶನ, ತರಬೇತಿ, ಪೂರಕ ಆಹಾರ ಕ್ರಮ ಇಲ್ಲವಾದರೆ ದೇಹದ ಮೇಲೆ ದುಷ್ಪರಿಣಾಮ ಬೀರಿ ಮಾರಕವಾಗುವ ಸಾಧ್ಯತೆ ಇದೆ. ಎಚ್ಚರಿಕೆ ಅಗತ್ಯ.

—ಎಂ.ಆರ್. ಚಂದ್ರಶೇಖರ್

## ನಿಜಕ್ಕೂ ನಿತ್ಯಸುಂದರಿ

‘ಸರ್ವಕಾಲಕ್ಕೂ ಸುಂದರ ದಾಲ್ಚಿನ್ನಿ ಮರ’ (ಜೂ.01, ವಿನುಗಂಗೆ) ಮರಗಳ ಕಥೆಯಲ್ಲಿ ಹೇಳಿರುವಂತೆ, ನಿಜಕ್ಕೂ ದಾಲ್ಚಿನ್ನಿ ನಿತ್ಯ ಸುಂದರಿಯೆ! 15 ವರ್ಷಗಳಿಂದ ಜತನವಾಗಿ ಕಾಪಾಡಿಕೊಂಡು ಬಂದಿದ್ದ ನಮ್ಮ ಕಾಡಿನ ತೋಟದಲ್ಲಿ ಬೆಳೆಸಿದ್ದ ಎರಡೂ ದಾಲ್ಚಿನ್ನಿ ಮರಗಳನ್ನು ಗಜರಾಜ ಆಪೋಶನ ತೆಗೆದುಗೊಂಡದ್ದು ನೆನಪಿಗೆ ಬಂತು.

—ಸಿ.ಆರ್. ಇಂದಿರಾ ಪ್ರಿಯದರ್ಶಿನಿ

## ಅದ್ಭುತ ಚಿತ್ರ-ಲೇಖನ

‘ಸ್ವರ್ಗದ ಸಾಂಗತ್ಯ ಕೊಡುವ ಹಸುರತಾಣ ದಯಾರ ಬುಗ್ಯಲ್’ (ಮೇ 25, ರವಿಶಂಕರ್ ಎಸ್.ಎಲ್.) ಪ್ರವಾಸಕಥನ ಅದ್ಭುತ ಅನುಭೂತಿ ನೀಡಿತು. ನಿರೂಪಣಾ ಶೈಲಿ, ಅಲ್ಲಿನ ಪರಿಸರವನ್ನು ಕಣ್ಮುಂದೆಯೇ ತಂದುಕೊಟ್ಟಿತು.



ಅದ್ಭುತ ಚಿತ್ರಲೇಖನ. ಆದರೆ ಅಲ್ಲಿಗೆ ಹೋಗಲು ಸೂಕ್ತ ಸಮಯ, ಹತ್ತಿರದ ನಗರ, ಚಾರಣ ಕೈಗೊಳ್ಳಲು ಬಯಸುವವರಿಗೆ ಸಹಾಯ ಮುಂತಾದ ವಿವರಗಳನ್ನು ಸೇರಿಸಿದ್ದರೆ ಇನ್ನೂ ಹೆಚ್ಚು ಉಪಯುಕ್ತವಾಗುತ್ತಿತ್ತು.

—ಶಾಲಿನಿ ವಿನಯ್, ಶೇಷಗಿರಿ ಎಚ್.ಎಸ್.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in